# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

-1-

ಇಲಾಖೆ / ವಿಷಯ : DEPARTMENT / SUBJECT: ಶಾಸಕಾಂಗ & ಸಂವಿಧಾನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 26/1/21




### ಕೈಬರಹದಲ್ಲಿತ್ತು ಮೂಲ ಪ್ರತಿ

1950 ಜನವರಿ 24ರಂದು ಸಂವಿಧಾನ ರಚನಾ ಸಮಿತಿಯ 284 ಸದಸ್ಯರು ಸಂವಿಧಾನ ಹಾಲ್‌ನಲ್ಲಿ (ಈಗಿರುವ ಸಂಸತ್ತಿನ ಸೆಂಟ್ರಲ್ ಹಾಲ್) ಸಂವಿಧಾನದ ಪ್ರತಿಗೆ ಸಹಿ ಹಾಕಿದರು. ಸಂವಿಧಾನವನ್ನು ಮೊದಲಿಗೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬರೆಯಲಾಗಿತ್ತು. ಇಂಗ್ಲಿಷ್ ಪ್ರತಿಯಲ್ಲಿ 1,17,369 ಪದಗಳಿದ್ದವು. ವಿಶೇಷವೆಂದರೆ, ಮೂಲ ಸಂವಿಧಾನ ಪ್ರತಿ ಟೈಪ್ ಆಗಿ ಮುದ್ರಣಗೊಂಡದ್ದಲ್ಲ. ಬದಲಿಗೆ ಕೈ ಬರಹದಲ್ಲೇ ಸಿದ್ಧಗೊಂಡಿತ್ತು.



ಪ್ರೇಮ್ ಬಿಹಾರಿ ನಾರಾಯಣ್ ರೈಜಾದಾ ಎಂಬುವರು ಇದನ್ನು ಇಟ್ಯಾಲಿಕ್ ಶೈಲಿಯಲ್ಲಿ ಸುಂದರವಾಗಿ ಬರೆದಿದ್ದರು. ಪ್ರತಿಪುಟವನ್ನೂ ಶಾಂತಿನಿಕೇತನದ ಕಲಾವಿದರಾಗಿದ್ದ ಬಿಯೋಹರ್ ರಾಮ್, ಮನೋಹರ್ ಸಿನ್ಹಾ ಮತ್ತು ನಂದಾಲಾಲ್ ಬೋಸ್ ವಿವಿಧ ಚಿತ್ತಾರಗಳಿಂದ ಅಲಂಕೃತಗೊಳಿಸಿದ್ದರು. ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಮೊದಲ ಪ್ರತಿ ಪ್ರಕಟಗೊಂಡಿತು. 1950ರ ಜ.26ರಂದು ಭಾರತದ ರಾಷ್ಟ್ರೀಯ ಲಾಂಛನವನ್ನೂ ಅಂಗೀಕರಿಸಲಾಯಿತು.

-2-

26 ಜನವರಿ

# ಸಂವಿಧಾನ ವಿಶೇಷ

ಇಂದು [illegible]ರಾಜ್ಯೋತ್ಸವ ದಿನ

## ಸಂವಿಧಾನ ಸಭೆ ಮೊದಲ ಅಧ್ಯಕ್ಷ ಸಿನ್ಹಾ

ಸ್ವತಂತ್ರ ಭಾರತದ ಸಂವಿಧಾನ ಸಭೆಯನ್ನೇ (Constituent Assembly ) ಮೊದಲ ಸಂಸತ್ತು ಎಂದು ಪರಿಗಣಿಸಲಾಗಿದೆ. 1946ರ ಡಿಸೆಂಬರ್ 9ರಂದು ಮೊದಲ ಸಭೆ ಸೇರಿದ್ದ ವೇಳೆ ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದವರು ಡಾ. ಸಚ್ಚಿದಾನಂದ ಸಿನ್ಹಾ. ಬಿಹಾರದ ಆರಾ ಪಟ್ಟಣದಲ್ಲಿ ಜನಿಸಿದ ಸಿನ್ಹಾ, ವಕೀಲ, ಸಂಸದೀಯ ಪಟು ಹಾಗೂ ಪತ್ರಕರ್ತರಾಗಿ ಪ್ರಸಿದ್ಧರಾಗಿದ್ದರು. ಲಂಡನ್ ನಲ್ಲಿ ಕಾನೂನು ಓದಿದ್ದ ಸಿನ್ಹಾ ನಂತರ ಬ್ಯಾರಿಸ್ಟರ್ ಆಗಿ ಸೇವೆ ಸಲ್ಲಿಸಿದರು. ಭಾರತ ಗಣರಾಜ್ಯವಾಗಿ ಪರಿವರ್ತನೆಗೊಂಡ ಒಂದೇ ತಿಂಗಳ ಅಂತರದಲ್ಲಿ (1950 ಮಾರ್ಚ್ 6ರಂದು) ಅವರು ನಿಧನ ಹೊಂದಿದರು. 1946ರಲ್ಲಿ ಸಂವಿಧಾನ ರಚನಾ ಸಮಿತಿಯ ಮೊದಲ ಸಭೆಯ 3 ವರ್ಷ, 11 ತಿಂಗಳು, 18 ದಿನಗಳ ನಂತರ ಸಂವಿಧಾನದ ಅಂತಿಮ ಕರಡು ಸಿದ್ಧಗೊಂಡಿತು. ಕರಡಿನ ಬಗ್ಗೆ ಸಾಕಷ್ಟು ಚರ್ಚೆ, ಸಮಾಲೋಚನೆಗಳು ನಡೆದವು. ಪರಿಣಾಮವಾಗಿ ಸಂವಿಧಾನದಲ್ಲಿ ಅಂದಾಜು 2000 ತಿದ್ದುಪಡಿಗಳನ್ನು ಮಾಡಲಾಯಿತು. ಅಂತೂ, 1949ರ ನವೆಂಬರ್ 26ರಂದು ಅಂತಿಮ ಪ್ರತಿ ಸಿದ್ಧಗೊಂಡಿತು.



ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 3

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE :

ದೇಶ ವಿದೇಶ

# ಸಂವಿಧಾನ ವಿಶೇಷ

26 ಜನವರಿ

ಇಂದು ಗಣರಾಜ್ಯೋ...

26-1-21

## ಅಮೆರಿಕ ಸಂವಿಧಾನದ ಛಾಯೆ



ದೇಶದ ಸುಪ್ರೀಂಕೋರ್ಟ್ ಅನ್ನು ನಿಯಂತ್ರಿಸುವ ಕಾನೂನುಗಳು ಮತ್ತು ಕಾನೂನಿನಿಂದ ಸ್ಥಾಪಿಸಲಾದ ಕಾರ್ಯವಿಧಾನ ಪರಿಕಲ್ಪನೆಯನ್ನು ಜಪಾನ್ ಸಂವಿಧಾನದಿಂದ ಅಳವಡಿಸಿಕೊಳ್ಳಲಾಗಿದೆ. ಭಾರತೀಯ ಸಂವಿಧಾನದ ಮುನ್ನುಡಿ ಅಮೆರಿಕ ಸಂವಿಧಾನ ಮುನ್ನುಡಿಯಿಂದ ಸ್ಫೂರ್ತಿ ಪಡೆದಿದೆ. ಎರಡೂ ಮುನ್ನುಡಿಗಳು ನಾವು ಜನರು (**We the People**) ಎಂಬ ವಾಕ್ಯದೊಂದಿಗೆ ಪ್ರಾರಂಭವಾಗುತ್ತವೆ. ತುರ್ತು ಪರಿಸ್ಥಿತಿಯಲ್ಲಿ ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸುವ ಪರಿಕಲ್ಪನೆಯನ್ನು ಭಾರತವು ಜರ್ಮನಿಯ ವೀಮರ್ ಸಂವಿಧಾನದಿಂದ ಪಡೆದುಕೊಂಡಿದೆ.